ದಿನಾಂಕ **03.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 1 ರಿಂದ 3ನೇ ಆರೋಪಿಯ ಪರವಾಗಿಃ ಶ್ರೀ ಸಿ ಎನ್ ಆರ್ ವಕೀಲರಿಂದ**

**05**. ಸರ್ವೇ ನಂ.265/2 ರಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 37 ಗುಂಟೆ ಇರುತ್ತದೆ. ನಾನು ನನ್ನ ದೂರಿನಲ್ಲಿ ಸರ್ವೇ ನಂ. 265/2 ರಲ್ಲಿ 7 ಎಕರೆ ಇದೆ ಎಂದು ಬರೆಸಿರುತ್ತೇನೆ. ನಾನು ಆರೋಪಿಗಳ ಜಮೀನನ್ನು ಲಪಾಟಾಯಿಸುವ ದುರಾಸೆಯಿಂದ 7 ಎಕರೆ ವಿಸ್ತೀರ್ಣದ ಜಮೀನು ಇದೆ ಎಂದು ತಪ್ಪು ಮಾಹಿತಿ ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು 8ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಕೋಳಿ ಪಾರ್ಮ್ ಹಾಗೂ ಇಟ್ಟಿಗೆ ತಯಾರಿಸುವ ಭಟ್ಟಿ ನಡೆಸುತ್ತಿದ್ದೇನೆ.

06. ನಾನು ದೂರು ಕೊಡುವ 30 ದಿನಗಳ ಮೊದಲು ಮುಳ್ಳು ತಂತಿ ಬೇಲಿ ಹಾಕಿಸುವ ಸಲುವಾಗಿ ಕಲ್ಲು ಕಂಬಗಳನ್ನು ನೆಡೆಸಿದ್ದೆ. ಮುಳ್ಳುತಂತಿ ಬೇಲಿಯನ್ನು ಅಳವಡಿಸಿರಲಿಲ್ಲ. ಕಳ್ಳಿ ಬೇಲಿ ನೆಡೆಸಿದ್ದೆ. ನಮ್ಮ ಜಮೀನಿಗೆ ದನಕರುಗಳು ಬರುವುದನ್ನು ತಡೆಯುವ ಸಲುವಾಗಿ ಮುಳ್ಳುತಂತಿ ಬೇಲಿ ಹಾಕಿಸಬೇಕೆಂದು ಯೋಚಿಸಿದ್ದೆ. ಕಳ್ಳಿ ಬೇಲಿ ಇದ್ದಾಗ ದನಕರುಗಳು ನಮ್ಮ ಜಮೀನಿಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಕಲ್ಲು ಕಂಬಗಳನ್ನು ನೆಡೆಸುವ ಮೊದಲು 3ನೇ ಆರೋಪಿಗೆ ತಿಳಿಸಿದ್ದೆ. ನಾನು ಕಲ್ಲು ಕಂಬಗಳನ್ನು ನಡೆಸುವ ವಿಚಾರ ಆರೋಪಿ 1 ಮತ್ತು 2 ರವರಿಗೆ ತಿಳಿದಿತ್ತೋ ಇಲ್ಲವೋ ಗೊತ್ತಿಲ್ಲ. 3ನೇ ಆರೋಪಿಯೇ ಮುಂದೆ ನಿಂತು ಕಲ್ಲುಕಂಬಗಳನ್ನು ನೆಡೆಸಿರುತ್ತಾರೆ. ಕಲ್ಲುಕಂಬಗಳನ್ನು ನೆಡೆಸುವಾಗ ಆರೋಪಿಗಳಿಂದ ಯಾವುದೇ

ಪ್ರತಿಭಟನೆ ಇರಲಿಲ್ಲ. ಮುಳ್ಳುತಂತಿಯನ್ನು ಅಳವಡಿಸುವಾಗ ಆರೋಪಿಗಳು ಯಾವುದೇ ಪ್ರತಿರೋಧ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಕಲ್ಲುಕಂಬಗಳನ್ನು ನೆಡೆಸುವಾಗಲೇ ಮುಳ್ಳುತಂತಿಯನ್ನು ಅಳವಡಿಸುವುದಾಗಿ 3ನೇ ಆರೋಪಿಯ ಬಳಿ ಹೇಳಿದ್ದೆ. ನಾನು ಈ ದೂರು ದಾಖಲಿಸುವ 1 ತಿಂಗಳ ಮೊದಲೇ ಮುಳ್ಳು ತಂತಿಯನ್ನು ತೆರೆಸಿಟ್ಟಿದ್ದೆ ಎಂದು ಸೂಚಿಸುವುದು ಸರಿಯಲ್ಲ. ನಾನು ಕಲ್ಲು ಕಂಬಗಳನ್ನು ನೆಡಸಿದ ಒಂದು ತಿಂಗಳ ನಂತರ ಅಂದಾಜು 30 ರಿಂದ 32 ದಿನಗಳ ನಂತರ ಮುಳ್ಳುತಂತಿಯನ್ನು ತರೆಸಿದೆ.

07. ಆರೋಪಿಗಳು ಮುಳ್ಳುತಂತಿ ಬೇಲಿಯನ್ನು ಅಳವಡಿಸಲು ಸಮ್ಮತಿ ನೀಡಿದ್ದ ಕಾರಣ, ನಾನು ಮುಳ್ಳು ತಂತಿಯನ್ನು ಅಳವಡಿಸುವ ಸಂದರ್ಭದಲ್ಲಿ ಆರೋಪಿ 1 ರಿಂದ 3 ಬಂದು ನನ್ನನ್ನು ಕುರಿತು ನೀನು ಯಾಕೆ ತಂತಿಯನ್ನು ಎಳಿಸುತ್ತಿದ್ದೀಯೇ, ನೀನು ಏನಾದರೂ ಹೇಳಿದರು ಸುಮ್ಮನಾಗುವುದಿಲ್ಲ. ಎಂದು ಹೇಳಿರುವುದಿಲ್ಲ ಎಂದು ಸೂಾಚಿಸುವುದು ಸರಿಯಲ್ಲ. ಆರೋಪಿ 1 ರಿಂದ 3 ರವರು ನನ್ನನ್ನು ಬೋಳಿ ಮಗನೇ, ಸೂಳೇ ಮಗನೇ ಎಂದು ಬೈದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿ 1 ರಿಂದ 3 ಬಂದು ನನ್ನನ್ನು ಕುರಿತು ನೀನು ಯಾಕೆ ತಂತಿಯನ್ನು ಎಳಿಸುತ್ತಿದ್ದೀಯೇ, ನೀನು ಏನಾದರೂ ಹೇಳಿದರು ಸುಮ್ಮನಾಗುವುದಿಲ್ಲ ಎಂದು ನನ್ನ ದೂರಿನಲ್ಲಿ ನಾನು ತಿಳಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

08. ಆರೋಪಿಗಳು ನನ್ನನ್ನು ಕುರಿತು ನೀನು ತಂತಿಬೇಲಿಯನ್ನು ಹಾಕಿದರೆ ಸುಮ್ಮನಾಗುವುದಿಲ್ಲ ನಿನ್ನನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ, ನಿನ್ನನ್ನು ಸಾಯಿಸುತ್ತೇವೆ ಎಂದು ಬೈದರು ಎಂದು ನಾನು ಪೊಲೀಸರ ಎದುರು

ಹೇಳಿರುವುದಿಲ್ಲ ಹಾಗೂ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗಳು ನನಗೆ ಜೇವ ಬೆದರಿಕೆ ಹಾಕಿರುವುದೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗಳು ನನ್ನನ್ನು ಕುರಿತು ನೀನು ತಂತಿಬೇಲಿಯನ್ನು ಹಾಕಿದರೆ ಸುಮ್ಮನಾಗುವುದಿಲ್ಲ ನಿನ್ನನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ, ನಿನ್ನನ್ನು ಸಾಯಿಸುತ್ತೇವೆ ಎಂದು ಬೈದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

09. ನನ್ನ ಇಟ್ಟಿಗೆ factory Sy.No.62 ರಲ್ಲಿ ಇದೆ. ನನ್ನ ಇಟ್ಟಿಗೆ factory Sy.No.265/2 ಜಮೀನಿನ ಪಕ್ಕದಲ್ಲಿರುವುದಿಲ್ಲ. ಇನ್ನೂ ಎರಡು ಸರ್ವೇ ನಂಬರ್ ಗಳಾದ ನಂತರ ಇದೆ. ನಾನು ಅಳವಡಿಸಿದ ಕಲ್ಲುಕಂಬಗಳ ಪಕ್ಕದಲ್ಲೇ ಇಟ್ಟಿಗೆ factory ಇದೆ. ಇಟ್ಟಿಗೆ factory 26 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಇದೆ ಎಂದು ಸೂಚಿಸುವುದು ಸರಿಯಲ್ಲ, ಇಟ್ಟಿಗೆ factory 1 ಎಕರೆ 9 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿದೆ. ಇಟ್ಟಿಗೆ factory ಸರ್ವೇ ನಂ. 266/2 ಜಮೀನಿನಲ್ಲಿ ಇದೆ ಎಂದರೆ ಸರಿ. ಸರ್ವೇ 266/2 ಜಮೀನು 2ನೇ ಆರೋಪಿ ಮಹದೇವಸ್ವಾಮಿ ಹೆಸರಿನಲ್ಲಿದೆ ಎಂದು ಸೂಚಿಸುವುದು ಸರಿಯಲ್ಲ. ಅದು ನಮ್ಮ ತಂದೆಯವರ ಹೆಸರಿನಲ್ಲಿ ಇದೆ.

10. ನಾನು ಕಲ್ಲುಕಂಬಗಳನ್ನು ತರಿಸಿದ ದಿನಾಂಕ ಗೊತ್ತಿಲ್ಲ. ಅದನ್ನು 1 ಅಥವಾ 2 ವರ್ಷದ ಹಿಂದೆ ತರಿಸಿದ್ದೇನೋ ಇಲ್ಲವೋ ಹೇಳಲು ಆಗುವುದಿಲ್ಲ. 3ನೇ ಆರೋಪಿಯು ನನ್ನ ದೊಡ್ಡಪ್ಪನ ಅಳಿಯ. ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಬೌಂಡ್ರಿಗಳು ಇನ್ನೂ ತೀರ್ಮಾನವಾಗಿಲ್ಲ ಎಂದು ಸೂಚಿಸುವುದು ಸರಿಯಲ್ಲ. 3ನೇ ಆರೋಪಿಗೆ ವೃದ್ದಾಪ್ಯದ ಕಾರಣವಾಗಿ ಸರಿಯಾಗಿ ಓಡಾಡಲು ಆಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

11. ನಮ್ಮ ಜಮೀನುಗೂ ಆರೋಪಿಗಳ ಜಮೀನಿಗೂ ಅಂದಾಜು 1 ಅಡಿ ಅಷ್ಟು ಎತ್ತರದಲ್ಲಿ ವ್ಯತ್ಯಾಸ ಇರುತ್ತದೆ. ನನ್ನ ಜಮೀನು ಎತ್ತರದಲ್ಲಿರುತ್ತದೆ. ಆರೋಪಿಗಳ ಜಮೀನು ತಗ್ಗಿನಲ್ಲಿರುತ್ತದೆ. ನಾನು ತಂತಿಯ ಪೂರ್ವಭಾಗದಲ್ಲಿ ನಿಂತು ಕಲ್ಲುಕಂಬಗಳಿಗೆ ತಂತಿಯನ್ನು ಎಳೆಸುತ್ತಿದ್ದೆ. ನಾನು ನಿಂತಿದ್ದ ಜಾಗ ಆರೋಪಿಗಳಿಗೆ ಸೇರಿದ ಜಾಗವಾಗಿರುತ್ತದೆ.

12. ಆರೋಪಿ 2 ಮತ್ತು 3 ರವರು ನನ್ನನ್ನು ತಬ್ಬಿಕೊಂಡು ಕೆಳಗೆ ಕೆಡವಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತ ಘಟನಾ ಸಮಯ ಸಂದರ್ಭ ಹಾಗೂ ಸ್ಥಳದಲ್ಲಿ 3 ಜನ ಆರೋಪಿಗಳು ಇರಲೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಮುಮಾ.1 ಹಾರೆಕೋಲು ನನಗೆ ಸೇರಿದ್ದು. ಕಲ್ಲುಕಂಬ ನೆಡಲು ತರೆಸಿದ್ದೆ. ಮುಮಾ.1 ಹಾರೆಕೋಲು ನನಗೆ ಸೇರಿದ್ದು ಎಂದು ದೂರಿನಲ್ಲಿ ತಿಳಿಸಿರುವುದಿಲ್ಲ. 1ನೇ ಆರೋಪಿಯು ಮುಮಾ.1 ರಿಂದ ನನ್ನ ತಲೆಗೆ ಹೊಡೆಯಲು ಪ್ರಯತ್ನಪಟ್ಟಾಗ ನಾನು ತಪ್ಪಿಸಿಕೊಂಡಾಗ ಮುಮಾ.1 ಹಾರೆಕೋಲಿ ಏಟು ನನ್ನ ಎಡಗಾಲಿಗೆ ಬಿದ್ದು ನನಗೆ ಪೆಟ್ಟಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. 1ನೇ ಆರೋಪಿಯು ಇನ್ನೊಂದು ಬಾರಿ ಮುಮಾ.1 ರಿಂದ ನನ್ನ ತಲೆಗೆ ಹೊಡೆಯಲು ಪ್ರಯತ್ನಿಸಿದಾಗ ನನ್ನ ಮಗ ವಿನಯಕುಮಾರ್ ಹಾಗೂ ಕೆಲಸ ಮಾಡುತ್ತಿದ್ದ ಆಳುಗಳಾದ ಚಾಸಾಃ 4, 5, 6, 7 ರವರು ಸ್ಥಳಕ್ಕೆ ಬಂದು 1ನೇ ಆರೋಪಿಯ ಕೈಯಲ್ಲಿದ್ದ ಮುಮಾ.1 ಅನ್ನು ಕಿತ್ತು ಬಿಸಾಕಿ ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

13. ನನ್ನನ್ನು ಚಾಮರಾಜನಗರ ಜೆಎಸ್ ಎಸ್ ಆಸ್ಪತ್ರೆಗೆ ಮಧ್ಯಾಹ್ನ 1.00 ಗಂಟೆಗೆ ಕರೆದುಕೊಂಡು ಬಂದು ಸೇರಿಸಿರುತ್ತಾರೆ. ನನ್ನನ್ನು ಆಸ್ಪತ್ರೆಗೆ ದಾಖಲಿಸುವ ಸಮಯದಲ್ಲಿ ಯಾವ ಕಾರಣಕ್ಕಾಗಿ ಆಸ್ಪತ್ರೆಗೆ ಬಂದಿರುತ್ತೀರಿ ಎಂದು ಕೇಳಿರುತ್ತಾರೆ. ನಾನು ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ನನ್ನ ಮೇಲೆ ಆರೋಪಿಗಳು ಹಲ್ಲೆ ಮಾಡಿರುವುದಾಗಿ ಹೇಳಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನಗೆ ಈಗ 65 ವರ್ಷ ಪ್ರಾಯವಾಗಿದೆ. ದಿಃ 08.03.2018 ರಂದು ನಾನು ನಿಪಿಃ 1 ರಂತೆ ದೂರು ಕೊಟ್ಟಿರುತ್ತೇನೆ. ನಾನು ದೂರು ನೀಡಿದಾಗ ನನ್ನ ದೂರಿನಲ್ಲಿ ನನ್ನ ವಯಸ್ಸನ್ನು 65 ವರ್ಷ ಎಂದು ಬರೆಸಿರುತ್ತೇನೆ. ನಾನು ನನ್ನ ವಯಸ್ಸು 65 ವರ್ಷ ಎಂದು ಡಾಕ್ಟರ್ ಬಳಿ ಹೇಳಿರುತ್ತೇನೆ. ನಾನು ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಆ ದಿನವೇ ಜೆ ಎಸ್ ಎಸ್ ಆಸ್ಪತ್ರೆಯಿಂದ ಮೈಸೂರಿನ ಅನ್ನಪೂರ್ಣ ಆಸ್ಪತ್ರೆಗೆ ಸಾಯಂಕಾಲ ಸುಮಾರು 6.00 ಗಂಟೆ ವೇಳೆಯಲ್ಲಿ ಹೋಗಿರುತ್ತೇನೆ. ನಾನು ಉತ್ತಮ ಚಿಕಿತ್ಸೆ ಪಡೆದುಕೊಳ್ಳುವ ಸಲುವಾಗಿ ಮೈಸೂರಿನ ಅನ್ನಪೂರ್ಣ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಅನ್ನಪೂರ್ಣ ಆಸ್ಪತ್ರೆಯಲ್ಲಿ ನನ್ನ ವಯಸ್ಸನ್ನು ಎಷ್ಟು ಬರೆಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಮಾಹಿತಿ ಕೊಟ್ಟಿರುತ್ತಾನೆ. ನನ್ನ ಮಗನಿಗೆ ನನ್ನ ವಯಸ್ಸು ತಿಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಅನ್ನಪೂರ್ಣ ಆಸ್ಪತ್ರೆಯಲ್ಲಿ ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿರುವುದಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅನ್ನಪೂರ್ಣ ಆಸ್ಪತ್ರೆಯಲ್ಲಿ ನನ್ನನ್ನು ಅದೇ ದಿನ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅನ್ನಪೂರ್ಣ ಆಸ್ಪತ್ರೆಯಲ್ಲಿ ಎಕ್ಸರೇ ಪರೀಕ್ಷೆ ಮಾಡಿರುವುದಿಲ್ಲ ಹಾಗೂ ಶಸ್ತ್ರ ಚಿಕಿತ್ಸೆ ಮಾಡಿರುವುದಿಲ್ಲ ಎಂದು

ಸೂಚಿಸುವುದು ಸರಿಯಲ್ಲ. ಜೆಎಸ್ಎಸ್ ಆಸ್ಪತ್ರೆಯಲ್ಲಿ ನನಗೆ ಎಕ್ಸರೆ ಮಾಡಿರುವುದಿಲ್ಲ. ಆರೋಪಿತ ಘಟನಾ ದಿನಾಂಕದಂದು ನಾನು ಲಬ್ಬೆ ಪಂಚೆ ಧರಿಸಿದ್ದೆ. ನಾನು ತೊಟ್ಟಿದ್ದ ಬಟ್ಟೆಗಳು ಮಣ್ಣಾಗಿರಲಿಲ್ಲ ಅಥವಾ ರಕ್ತದ ಕಲೆಯಾಗಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನಗೆ ಅಂದಾಜು 20 ವರ್ಷಗಳಿಂದ ಹೈ ಬಿಪಿ ಇರುತ್ತದೆ.

(ಮಾನ್ಯ ಸಿಎನ್ ಆರ್ ವಕೀಲರ ಕೋರಿಕೆಯಂತೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಲಾಗಿ ಕೇಳಿ ಸರಿಯಿದೆ ಎಂದು ಒಪ್ಪಿರುತ್ತಾರೆ.

**(ಎಸ್.ಜಿ. ಕೃಷ್ಣ)**
ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ತ್ವರಿತ ವಿಶೇಷ ನ್ಯಾಯಾಲಯ–I, ಚಾಮರಾಜನಗರ.